**ಓ.ಎಸ್. ನಂಃ 94/2023**

**<u>ಪಿಡಬ್ಲ್ಯೂಃ2</u>**

**ದಿನಾಂಕಃ 06.01.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಟಿ.ಜಿ ವಕೀಲರಿಂದಃ</u>**

1. ಯಾವ ಸರ್ವೆ ನಂಬರ್ ಗೆ ಸಂಬಂಧಿಸಿದಂತೆ ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಡಿಡಿಎಲ್ಆರ್ ಕಚೇರಿಯಲ್ಲಿ ಆದೇಶವಾಗಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ಸಹ ಪಕ್ಷಗಾರನಾಗಿದ್ದೆ ಎಂದರೆ ಸರಿ. 2019 ರಲ್ಲಿ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಡಿಡಿಎಲ್ ಆರ್ ಕಚೇರಿಯಲ್ಲಿ ಆದೇಶವಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಚೆಕ್ ಬಂದಿ ತಪ್ಪಾಗಿದ್ದು, ಅದನ್ನು ಸರಿಪಡಿಸುವಂತೆ ಆದೇಶವಾಗಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ.

2. ಸರ್ವೆ ನಂಬರ್ 270 ರಲ್ಲಿ ಒಟ್ಟು 6 ಪೋಡುಗಳಿವೆ ಎಂದರೆ ಸರಿ. ಸರ್ವೆ ನಂಬರ್ 270 ರಲ್ಲಿ ಆದ 6 ಪೋಡುಗಳು ಸಹ ಡಿ.ಡಿ.ಎಲ್.ಆರ್ ರವರು ರದ್ದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 270 ರಲ್ಲಿ ನನಗೆ ಸೇರಿದ ಪೋಡ್ ನಂಬರ್ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 270 ರಲ್ಲಿ ನನಗೆ ಸೇರಿದ ಪೋಡನ್ನು ಸೇರಿಸಿ ಎಲ್ಲ ಪೋಡುಗಳು ಸಹ ರದ್ದಾಗಿರುತ್ತವೆ ಎಂದರೆ ಸರಿಯಲ್ಲ. 2019 ರಲ್ಲಿ ಡಿ.ಡಿ.ಎಲ್.ಆರ್ ಕಚೇರಿಯಲ್ಲಿ ಆದೇಶವಾದ ನಂತರ ನಾನು ಎ.ಡಿ.ಎಲ್.ಆರ್ ಕಚೇರಿಗೆ ಸರ್ವೆ ಮಾಡುವಂತೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ.

3. ಈ ದಾವೆಯ ವಾದಿ ಮತ್ತು ಪ್ರತಿವಾದಿ ನನ್ನ ಖಾಸ ಸಹೋದರರು ಎಂದರೆ ಸರಿ. ವಾದಿಯು ಇದೇ ನ್ಯಾಯಾಲಯದಲ್ಲಿ ಈ ಹಿಂದೆ ಅಸಲು ದಾವೆ ಸಂಖ್ಯೆ 303/2020 ರಂತೆ ದಾವೆಯನ್ನು ಹೂಡಿದ್ದರು ಎಂದರೆ ಸರಿ. ಸದರಿ ದಾವೆ ವಜಾ ಆದ ನಂತರ ವಾದಿಯು ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಅಸಲು ದಾವೆ ಸಂಖ್ಯೆ 303/2020 ರ ದಾವೆಯು ವಜಾ ಆದ ನಂತರ ವಾದಿಯು ತಿದ್ದುಪಡಿ ಕ್ರಯಪತ್ರ ಮಾಡಿಸಿಕೊಂಡು ನಂತರ ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸಾಕ್ಷಿಯು ಕೇವಲ ಡಿ.ಡಿ.ಎಲ್.ಆರ್ ಕಚೇರಿಯಲ್ಲಿ ಚೆಕ್ಕುಬಂದಿ ತಪ್ಪಾಗಿರುತ್ತದೆ ಎಂದು ಆದೇಶವಾದ ವಿಷಯವನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ

ವಿಷಯದ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ವಾದಿಯು ತಿದ್ದುಪಡಿ ಕ್ರಯಪತ್ರ ಮಾಡಿಸಿಕೊಂಡಿರುವ ವಿಷಯ ನನಗೆ ಗೊತ್ತಿಲ್ಲ.

4. ದಿಃ 20.03.1991 ರಲ್ಲಿ ಸರ್ವೆ ನಂಬರ್ 270/2 ರಲ್ಲಿ 24 ಗುಂಟೆ ಜಮೀನನ್ನು ವಾದಿಯು ಖರೀದಿ ಮಾಡಿರುವ ವಿಷಯ ನನಗೆ ಗೊತ್ತಿದೆ. ಸದರಿ 24 ಗುಂಟೆ ಜಮೀನಿನ ಪೈಕಿ 2 ಗುಂಟೆ ಕರಾಬು ಜಮೀನು ಇದೆ ಎಂದರೆ ಸರಿ. ಸರ್ವೆ ನಂಬರ್ 270/2 ರ ಸದರಿ 22 ಗುಂಟೆ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆ ಬೀಳು ಕಾಲುವೆ, ಪಶ್ಚಿಮಕ್ಕೆ ನೀರು ಹರಿಯುವ ಹಳ್ಳ ಇದೆ ಎಂದರೆ ಸರಿ. ಉತ್ತರಕ್ಕೆ ನಂಜುಂಡೇಗೌಡರಿಂದ ವಾದಿ ಖರೀದಿ ಮಾಡಿದ ಜಮೀನು ಮತ್ತು ದಕ್ಷಿಣಕ್ಕೆ ಪ್ರತಿವಾದಿಯ ಜಮೀನು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಕ್ಷಿಣ ದಿಕ್ಕಿಗೆ ನನ್ನ ಮತ್ತು ವಾದಿಯ ಜಮೀನು ಇದೆ ಎಂದು ಸ್ವತಃ ನುಡಿದಿರುತ್ತಾರೆ.

5. ದಿಃ 20.05.2011 ರಂದು ವಾದಿಯು ಸರ್ವೆ ನಂಬರ್ 270/5 ರ ಮೂವತ್ತುವರೆ ಗುಂಟೆ ಜಮೀನಿನ ಸಂಬಂದ ಪ್ರತಿವಾದಿಗೆ ದಾನಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದಾನಪತ್ರವನ್ನು ನಾನು ನೋಡಿರುತ್ತೇನೆ. ಸದರಿ ದಾನಪತ್ರದ ಉತ್ತರ ದಿಕ್ಕಿಗೆ ವಾದಿಯ ಉಳಿಕೆ ಜಮೀನು ಇದೆ ಎಂದು ನಮೂದಾಗಿರುತ್ತದೆ ಎಂದರೆ ಸರಿ.

6. ದಾವಾ ಆಸ್ತಿಯನ್ನು ವಾದಿ 2011 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. 1991 ರಲ್ಲಿ 22 ಗುಂಟೆ ಜಮೀನನ್ನು ಸರ್ವೆ ನಂಬರ್ 270/2 ರಲ್ಲಿ ಖರೀದಿ ಮಾಡಿದ ದಿನದಿಂದ ಇಂದಿನವರೆಗೂ ಪ್ರತಿವಾದಿಯೇ ಸದರಿ ಜಮೀನಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 2 ನೇ ಪುಟದಲ್ಲಿ ಬರೆಸಿರುವ ಪಾಲು ವಿಭಜನೆಯು ಸುಮಾರು 40 ವರ್ಷಗಳ ಹಿಂದೆ ಆಗಿದ್ದು, ಅದು ಲಿಖಿತ ಪಾಲು ವಿಭಜನೆಯಾಗಿರುತ್ತದೆ. ಸದರಿ ವಿಭಾಗ ಪತ್ರವು ನನ್ನ ಬಳಿ ಇದೆ. ಸಾಕ್ಷಿಯು ಮುಂದುವರೆದು ಈಗ ವಿಭಾಗಪತ್ರವು ನನ್ನ ಬಳಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ.3 ರ ದಾಖಲೆಗೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ. ವಾದಿಯು ಕೆ.ಆರ್.ನಗರದಲ್ಲಿ ವಾಸವಿದ್ದಾರೆ ಎಂದರೆ ಸರಿ.

7. ದಾವಾ ಆಸ್ತಿಯನ್ನು ವಾದಿಯೇ ನೋಡಿಕೊಳ್ಳುತ್ತಿದ್ದಾರೆ. ವಾದಿಯು ಕೆ.ಆರ್.ನಗರದಲ್ಲಿ ವಾಸವಿರುವುದರಿಂದ ದಾವಾ ಆಸ್ತಿಯನ್ನು ನಾನೇ ನೋಡಿಕೊಳ್ಳುತ್ತಿರುವ ಕಾರಣ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ

ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಕೆ.ಆರ್.ನಗರ